# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 328 |
| ಮಾನ್ಯ ಸದಸ್ಯರ ಹೆಸರು : | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 07.07.2023 |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಯುವತಿ/ಮಹಿಳೆಯರಿಗೆ ಸರ್ಕಾರದಿಂದ ದೊರಕುವ ಯೋಜನೆಗಳು ಯಾವುವು: (ವಿವರ ನೀಡುವುದು) | ಮಾಹಿತಿಯನ್ನು ಅನುಬಂಧ – 1 ರಲ್ಲಿ ಒದಗಿಸಿದೆ. |
| (ಆ) | ರಾಜ್ಯದ ಯುವತಿ/ಮಹಿಳೆಯರು ಯೋಜನೆಗಳ ಫಲಾನುಭವಿಗಳಾಗಲು ಇರುವ ಮಾನದಂಡಗಳೇನು; (ವಿವರ ನೀಡುವುದು) | |
| (ಇ) | ಪ್ರಸ್ತುತ ರಾಜ್ಯದಲ್ಲಿ ಯುವತಿ/ ಮಹಿಳೆಯರ ಫಲಾನುಭವಿಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಮಾಹಿತಿಯನ್ನು ಅನುಬಂಧ-02 ರಲ್ಲಿ ಒದಗಿಸಿದೆ. |
| (ಈ) | ಈ ಯೋಜನೆಗಳಿಗೆ ವಾರ್ಷಿಕ ಅಂದಾಜು ವೆಚ್ಚ ಎಷ್ಟು? (ವಿವರ ನೀಡುವುದು) | ಮಾಹಿತಿಯನ್ನು ಅನುಬಂಧ-03 ರಲ್ಲಿ ಒದಗಿಸಿದೆ |

ಸಂಖ್ಯೆ: ಮಮಇ 69 ಸ್ಕೀಮರ 2023

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

## ಅನುಬಂಧ-1

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ರಾಜ್ಯದ ಯುವತಿ / ಮಹಿಳೆಯರಿಗೆ ಸರ್ಕಾರದಿಂದ ದೊರಕುವ ಯೋಜನೆಗಳು ಹಾಗೂ ಸದರಿ ಯೋಜನೆಗಳ ಫಲಾನುಭವಿಗಳಾಗಲು ಇರುವ ಮಾನದಂಡಗಳು

**(1) ಸಾಂತ್ವನ:** ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಶ್ರಯವನ್ನು ಒದಗಿಸಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರನ್ನಾಗಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ರಾಜ್ಯದಲ್ಲಿ 180 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಮಾನದಂಡ** : 18 ವರ್ಷ ಮೇಲ್ಪಟ್ಟ ನೊಂದ ಮಹಿಳೆಯರು ವ್ಯಾಪ್ತಿ ಪ್ರದೇಶದ ತಾಲ್ಲೂಕು ಕೇಂದ್ರಗಳಲ್ಲಿ ಸಮಾಲೋಚನಾ ಸೇವೆ ಪಡೆಯಬಹುದಾಗಿದೆ.

**(2) ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006 :**
ಕುಟುಂಬದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದಾಗ, ನ್ಯಾಯಾಲಯದ ಮುಖಾಂತರ ಮಹಿಳೆಯರಿಗೆ ಆರ್ಥಿಕ ಪರಿಹಾರ, ರಕ್ಷಣಾ ಆದೇಶ, ವಾಸದ ಆದೇಶ, ಮಕ್ಕಳ ವಶ, ತಾತ್ಕಾಲಿಕ ಆಶ್ರಯ, ವೈದ್ಯಕೀಯ ಹಾಗೂ ಕಾನೂನು ನೆರವನ್ನು ಒದಗಿಸಲು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ಹಾಗೂ ನಿಯಮ 2006ನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಮಾನದಂಡ** : 18 ವರ್ಷ ಮೇಲ್ಪಟ್ಟ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ವ್ಯಾಪ್ತಿ ಪ್ರದೇಶದ ಸಂರಕ್ಷಣಾಧಿಕಾರಿಗಳ ಮೂಲಕ ನ್ಯಾಯಾಲಯದಲ್ಲಿ ದೂರು ದಾಖಲಿಸಬಹುದು.

**(3) ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯಗಳು:-** 2022-23ನೇ ಸಾಲಿನಲ್ಲಿ ಬೆಂಗಳೂರು ನಗರ, ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ದಕ್ಷಿಣ ಕನ್ನಡ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ 24 ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಹೊಸದಾಗಿ ಪ್ರಾರಂಭಿಸಲಾಗುತ್ತಿದೆ. ಗಾರ್ಮೆಂಟ್ಸ್, ಕೈಗಾರಿಕೆಗಳು ಮತ್ತು ಇತರ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ದುಡಿಯುವ ಮಹಿಳೆಯರಿಗೆ ಆದ್ಯತೆ ಮೇರೆಗೆ ಸೌಲಭ್ಯ ನೀಡಲಾಗುವುದು.

**ಮಾನದಂಡ** : ಅಸಂಘಟಿತ ವಲಯಗಳಲ್ಲಿ ಹಾಗೂ ಗಾರ್ಮೆಂಟ್ಸ್ ಇತ್ಯಾದಿಗಳಲ್ಲಿ ಕೆಲಸ ನಿರ್ವಹಿಸುವ ಉದ್ಯೋಗಸ್ಥ ಮಹಿಳೆಯರು ಸೌಲಭ್ಯ ಪಡೆಯಬಹುದಾಗಿದೆ.

**(4) ಸ್ವಾಧಾರಗೃಹ :** ಸಂಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶವಾಗಿರುತ್ತದೆ. ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ನೋಂದಣಿಯಾಗಿ ಸತತವಾಗಿ ಮೂರು ವರ್ಷಗಳ ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಹಾಗೂ ಆರ್ಥಿಕವಾಗಿ ಸದೃಢವಾದ ಮತ್ತು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಹಾಗೂ ಅನುಭವವಿರುವ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದಲ್ಲಿ ಪ್ರಸ್ತುತ 51 ಸ್ವಾಧಾರಗೃಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

**ಮಾನದಂಡ** : 18 ವರ್ಷ ಮೇಲ್ಪಟ್ಟ ತಾತ್ಕಾಲಿಕ ಆಶ್ರಯ ಬಯಸುವ ನೊಂದ/ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಸೌಲಭ್ಯ ಪಡೆಯಬಹುದು.

**(5) ಒನ್ ಸ್ಟಾಪ್ ಸೆಂಟರ್ :** ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸುವ ಉದ್ದೇಶದಿಂದ ಒನ್ ಸ್ಟಾಪ್ ಸೆಂಟರ್ ಕೇಂದ್ರ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಪ್ರಸ್ತುತ 31 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

**ಮಾನದಂಡ** : 18 ವರ್ಷ ಮೇಲ್ಪಟ್ಟ ದೌರ್ಜನ್ಯಕ್ಕೊಳಗಾದ ಮಹಿಳೆಯರು ಒಂದೇ ಸೂರಿನಡಿ ವಿವಿಧ ಸೌಲಭ್ಯ ಪಡೆಯಬಹುದಾಗಿದೆ.

**(6) ಸ್ವೀಕಾರ ಕೇಂದ್ರ ಹಾಗೂ ರಾಜ್ಯ ಮಹಿಳಾ ನಿಲಯ:-** ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ದಾಖಲಿಸಲ್ಪಟ್ಟ ಮಹಿಳೆಯರ ತಾತ್ಕಾಲಿಕ ಪುನರ್ವಸತಿಗಾಗಿ 4 ಸ್ವೀಕಾರ ಕೇಂದ್ರಗಳು ಹಾಗೂ ಧೀರ್ಘಾವಧಿ ಪುನರ್ವಸತಿಗಾಗಿ 8 ರಾಜ್ಯ ಮಹಿಳಾ ನಿಲಯಗಳನ್ನು ಕಾರ್ಯನಿರ್ವಹಿಸುತ್ತಿವೆ. ಈ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪಾಲನೆ, ಪೋಷಣೆ, ಊಟ, ವಸತಿ, ಬಟ್ಟೆ, ಸಮಾಲೋಚನೆ, ವೈದ್ಯಕೀಯ ಸೌಲಭ್ಯ, ಮನರಂಜನೆ ಮತ್ತು ಕೌಶಲ್ಯ ತರಬೇತಿಯನ್ನು ನೀಡಲಾಗುವುದು.

**ಮಾನದಂಡ :** ರಕ್ಷಣೆ ಹಾಗೂ ಪೋಷಣೆಯ ಅಗತ್ಯವಿರುವ 18 ವರ್ಷ ಮೇಲ್ಪಟ್ಟ ಮಹಿಳೆಯರು ಸ್ವಇಚ್ಛೆಯಿಂದ , ಸ್ವಯಂ ಸೇವಾ ಸಂಸ್ಥೆಗಳ ಮೂಲಕ, ಯಾವುದೇ ವ್ಯಕ್ತಿಗಳ ಮೂಲಕ ಅಥವಾ ಪೋಲಿಸರ ಮೂಲಕ ದಾಖಲಾಗಬಹುದಾಗಿದೆ.

**(7) ಬಾಲಕಿಯರ ವಸತಿ ನಿಲಯ:** ಈ ಯೋಜನೆಯಡಿ ಹಿಂದುಳಿದ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಅನುಕೂಲವಾಗುವಂತೆ, ಇಲಾಖಾ ಅನುದಾನಿತ ಸ್ವಯಂಸೇವಾ ಸಂಸ್ಥೆಗಳ ಮೂಲಕ 21 ಜಿಲ್ಲೆಗಳಲ್ಲಿ 37 ವಸತಿ ನಿಲಯಗಳನ್ನು (ಮೆಟ್ರಿಕ್‌ಪೂರ್ವ–19, ಮೆಟ್ರಿಕ್‌ನಂತರ – 18) ನಡೆಸಲಾಗುತ್ತಿದೆ.

**ಮಾನದಂಡ :** ಬಾಲಕಿಯರ ಕುಟುಂಬವು ಬಡತನ ರೇಖೆಗಿಂತ ಕೆಳಗಿರಬೇಕು. ಬಾಲಕಿಯರ ವಸತಿ ನಿಲಯಗಳಲ್ಲಿ ಪ್ರಯೋಜನ ಪಡೆಯುವ ಬಾಲಕಿಯರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರಬೇಕು. ಬಾಲಕಿಯರು 6ನೇ ತರಗತಿ ಹಾಗೂ ನಂತರದ ತರಗತಿಗಳಲ್ಲಿ ಹಾಗೂ ವೃತ್ತಿ ತರಬೇತಿಯಲ್ಲಿ ವ್ಯಾಸಾಂಗ ಮಾಡುತ್ತಿರಬೇಕು.

**(8) ಶಕ್ತಿ ಸದನ (ಉಜ್ವಲ) ಯೋಜನೆ:-** ಈ ಯೋಜನೆಯಡಿ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆಗೆ ಹಾಗೂ ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು, ಇವರಿಗೆ ಪುನರ್ವಸತಿ ಕಲ್ಪಿಸುವುದು ಮತ್ತು ಕುಟುಂಬದವರೊಂದಿಗೆ ಪುನರ್ ವಿಲೀನಗೊಳಿಸಲಾಗುತ್ತಿದ್ದು, 13 ಉಜ್ವಲ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಮಾನದಂಡ :** ಐಟಿಪಿಎ (Immoral Trafficking Prevention Act,1956) ರಡಿ ದಾಖಲಾದ, 18 ವರ್ಷ ಮೇಲ್ಪಟ್ಟ ಮಹಿಳೆಯರು ಸ್ವಯಂ ಸೇವಾ ಸಂಸ್ಥೆಗಳ ಮೂಲಕ, ಯಾವುದೇ ವ್ಯಕ್ತಿಗಳ ಮೂಲಕ ಅಥವಾ ಪೋಲಿಸರ ಮೂಲಕ ದಾಖಲಾಗಬಹುದಾಗಿದೆ.

**(9) ಶಿಶು ಪಾಲನಾ ಕೇಂದ್ರಗಳು:-** ಪ್ರತಿ ಜಿಲ್ಲೆಯ 2 ಸರ್ಕಾರಿ ಕಛೇರಿಗಳಲ್ಲಿ ಮತ್ತು ಪ್ರತಿ ಜಿಲ್ಲೆಯ 2 ತಾಲ್ಲೂಕುಗಳಲ್ಲಿ ಹೆಚ್ಚು ಮಹಿಳಾ ಕಾರ್ಮಿಕರ ಸಾಂದ್ರತೆ ಇರುವ ಪ್ರದೇಶಗಳಲ್ಲಿ ಮತ್ತು ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ ಒಟ್ಟು 122 ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

**ಮಾನದಂಡ:** ಜಿಲ್ಲಾ ಶಿಶು ಪಾಲನಾ ಕೇಂದ್ರಗಳಲ್ಲಿ ಸರ್ಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ 6 ವರ್ಷದ ಒಳಗಿನ ಮಕ್ಕಳಿಗೆ ಅವಕಾಶವಿರುತ್ತದೆ. ತಾಲ್ಲೂಕು ಶಿಶು ಪಾಲನಾ ಕೇಂದ್ರಗಳಲ್ಲಿ ಮಹಿಳಾ ಕಾರ್ಮಿಕರ 6 ತಿಂಗಳಿಂದ 6 ವರ್ಷದ ಒಳಗಿನ ಮಕ್ಕಳಿಗೆ ಅವಕಾಶವಿರುತ್ತದೆ.

**(10) ಸ್ತ್ರೀಶಕ್ತಿ ಯೋಜನೆ:**ಸ್ತ್ರೀಶಕ್ತಿ ಯೋಜನೆಯನ್ನು ರಾಜ್ಯದಲ್ಲಿ ಅಕ್ಟೋಬರ್ **2000** ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು **1,65,960** ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ರಚನೆಯಾಗಿವೆ. ಮಹಿಳೆಯರನ್ನು ಸ್ತ್ರೀಶಕ್ತಿ ಗುಂಪುಗಳಲ್ಲಿ ಸಂಘಟಿಸುವುದರ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಸಶಕ್ತತೆಯನ್ನು ತರುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

- **ಮಾನದಂಡ:ಸುತ್ತುನಿಧಿ:** ಗುಂಪು ರಚನೆಯಾಗಿ ಕನಿಷ್ಠ 6 ತಿಂಗಳಾಗಿರಬೇಕು, ಗುಂಪಿನಲ್ಲಿ ಕನಿಷ್ಠ 15 ರಿಂದ 20 ಸದಸ್ಯರಿರಬೇಕು, ಪ್ರತಿ ಸದಸ್ಯರು ಉಳಿತಾಯ ಪ್ರಾರಂಭಿಸಿರಬೇಕು, ಪ್ರತಿವಾರ ಸದಸ್ಯರು ಸಭೆ ನಡೆಸಬೇಕು, ಗುಂಪಿನ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು, ಗುಂಪಿನಲ್ಲಿ ನಿಗದಿಪಡಿಸಿದ ದಾಖಲಾತಿಗಳನ್ನು ನಿರ್ವಹಿಸುತ್ತಿರಬೇಕು, ಗುಂಪಿನ ಆಂತರಿಕ ಸಾಲ ಹಾಗೂ ಸಾಲ ಮರುಪಾವತಿ ಉತ್ತಮವಾಗಿರಬೇಕು. **ಹೆಚ್ಚುವರಿ ಸುತ್ತುನಿಧಿ:** ಗುಂಪಿನಲ್ಲಿ 15-20 ಸದಸ್ಯರಿರಬೇಕು, ಶೇ 50%ಕ್ಕಿಂತ ಹೆಚ್ಚು ಸದಸ್ಯರು ಬಡತನ ರೇಖೆಗಿಂತ ಕೆಳಗಿರಬೇಕು, ಯೋಜನೆಯ ಪ್ರಾರಂಭದಿಂದ ಸತತವಾಗಿ ಕನಿಷ್ಠ 10 ವರ್ಷ ಕಾರ್ಯನಿರತವಾಗಿರಬೇಕು. ಸಾಕ್ಷರರಾಗಿರಬೇಕು, ಆಂತರಿಕ ಸಾಲ ಹಾಗೂ ಬ್ಯಾಂಕ ಸಾಲ ಪಡೆದಿರಬೇಕು, ಸಾಲ ಮರುಪಾವತಿ ಉತ್ತಮವಾಗಿರಬೇಕು, ದಾಖಲಾತಿಗಳನ್ನು ಗುಂಪಿನ ಸದಸ್ಯರು ನಿರ್ವಹಿಸುತ್ತಿರಬೇಕು, ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಸೌಲಭ್ಯ ಪಡೆದಿರಬೇಕು, ಮಾರುಕಟ್ಟೆ ಚಟುವಟಿಕೆಗಳಲ್ಲಿ ವಿಶೇಷವಾಗಿ ತೊಡಗಿರಬೇಕು, ಗೊಂಚಲು ಗುಂಪಿನ ಸದಸ್ಯರಾಗಿರಬೇಕು, ಪ್ರತಿ ವರ್ಷ ಗ್ರೇಡಿಂಗ್ ಮಾಡಬೇಕು, ಗುಂಪುಗಳು ಸಾಮಾಜಿಕ ಸುಧಾರಣೆ ಹಾಗೂ ಸಾಕ್ಷರತಾ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರಬೇಕು. ಆದಾಯೋತ್ಪನ್ನ ಚಟುವಟಿಕೆಗಳಿಗೆ ಪ್ರೋತ್ಸಾಹಧನ, ಅಧಿಕ ಉಳಿತಾಯ ಮಾಡಿದ ಗುಂಪುಗಳಿಗೆ ಪ್ರೋತ್ಸಾಹಧನ, ಬ್ಯಾಂಕ್ ಸಾಲದ ಮೇಲಿನ ಬಡ್ಡಿಗೆ 6%ರ ಸಹಾಯಧನ ನೀಡಲಾಗುವುದು.

**(11) ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ- ಮಾತೃಪೂರ್ಣ ಯೋಜನೆ:** ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಬಿಸಿಯೂಟವನ್ನು ಮಧ್ಯಾಹ್ನದ ವೇಳೆ ಅಂಗನವಾಡಿ ಕೇಂದ್ರದಲ್ಲಿಯೇ ನೀಡುವ "ಮಾತೃಪೂರ್ಣ" ಯೋಜನೆಯನ್ನು 2017 ಅಕ್ಟೋಬರ್ 2ನೇ ತಾರೀಖಿನಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿರುತ್ತದೆ. ಮಹಿಳೆಯರಿಗೆ ಆಹಾರ ಭದ್ರತೆಯನ್ನು ಒದಗಿಸುವ ಜೊತೆಗೆ ಹೆರಿಗೆ ಸಮಯದಲ್ಲಿನ ಗರ್ಭಿಣಿ ಹಾಗೂ ಶಿಶು ಮರಣ ಸಂಖ್ಯಾ ಪ್ರಮಾಣವನ್ನು ಮತ್ತು ಕಡಿಮೆ ತೂಕದ ಮಕ್ಕಳ ಜನನ ನಿಯಂತ್ರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಮಾತೃಪೂರ್ಣ ಯೋಜನೆಯಡಿ ಒದಗಿಸುವ ಊಟದಲ್ಲಿ ಅನ್ನ, ಸಾಂಬಾರ್, ಪಲ್ಯದ ಜೊತೆಗೆ ಬೇಯಿಸಿದ ಮೊಟ್ಟೆ, 200 ಮಿ.ಲೀ ಹಾಲು ಮತ್ತು ಚಿಕ್ಕಿಯನ್ನು ತಿಂಗಳಿಗೆ ಕನಿಷ್ಠ 25 ದಿನಗಳು ನೀಡಲಾಗುತ್ತಿದೆ. ಈ ಒಂದು ಪೂರ್ಣ ಊಟದಿಂದ ಗರ್ಭಿಣಿ ಮತ್ತು ಬಾಣಂತಿಯರಿಗೆ ಪ್ರತಿದಿನಕ್ಕೆ ಬೇಕಾಗುವ ಪ್ರೋಟೀನ್ ಮತ್ತು ಕ್ಯಾಲ್ಸಿಯಂ ಅಂಶಗಳಲ್ಲಿ ಶೇ.40-45 (RDA-1342 ಕ್ಯಾಲೋರಿ, 41 ಗ್ರಾಂ ಪ್ರೋಟೀನ್, 578 ಗ್ರಾಂ ಕ್ಯಾಲ್ಸಿಯಂ) ಕ್ಯಾಲೋರಿಗಳನ್ನು ಒದಗಿಸಿದಂತಾಗುತ್ತದೆ. ಪ್ರತಿ ಫಲಾನುಭವಿಗೆ ದಿನ ಒಂದಕ್ಕೆ ರೂ.21.00ರ (ರೂ.9.50/- ಸೇರಿದಂತೆ) ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.

**ಮಾನದಂಡ:** ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ ಎಲ್ಲಾ ಗರ್ಭಿಣಿಯರು ಹಾಗೂ ಮಗು ಜನನವಾಗಿ 06 ತಿಂಗಳವರೆಗೆ ಬಾಣಂತಿಯರು ಮಾತೃಪೂರ್ಣ ಯೋಜನೆಯ ಸೌಲಭ್ಯ ಪಡೆಯಬಹುದು.

**(12) ಪ್ರಾಯಪೂರ್ವ ಬಾಲಕಿಯರ ಯೋಜನೆ:** ಕಿಶೋರಾವಸ್ಥೆಯಲ್ಲಿರುವ ಬಾಲಕಿಯರಿಗೆ ಹೆಚ್ಚಿನ ರೀತಿಯಲ್ಲಿ ಪೌಷ್ಠಿಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ, ಕಿಶೋರಿ ಶಕ್ತಿ ಯೋಜನೆ (KSY) ಹಾಗೂ ಸಬಲ ಯೋಜನೆಗಳನ್ನು ವಿಲೀನಗೊಳಿಸಿ, 2018-19 ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಸದರಿ ಯೋಜನೆಯನ್ನು ಪ್ರಾಯಪೂರ್ವ ಬಾಲಕಿಯರ ಯೋಜನೆಯನ್ನಾಗಿ ಹೆಸರಿಸಿ, ಮಹತ್ವಕಾಂಕ್ಷಿ ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ 14-18 ವರ್ಷದ ಶಾಲೆಯಿಂದ ಹೊರಗುಳಿದ ಪ್ರಾಯಪೂರ್ವ ಬಾಲಕಿಯರನ್ನು ಯೋಜನೆಯ ಫಲಾನುಭವಿಗಳೆಂದು ಗುರುತಿಸಲಾಗಿರುತ್ತದೆ.

**ಮಾನದಂಡ:** ಅಂಗನವಾಡಿ ಕೇಂದ್ರಗಳಲ್ಲಿ ಕೇಂದ್ರಗಳಲ್ಲಿ ದಾಖಲಾಗಿರಬೇಕು, 14-18 ವರ್ಷದ ವಯೋಮಿತಿ ಹೊಂದಿರಬೇಕು ಹಾಗೂ ಶಾಲೆಯಿಂದ ಹೊರಗುಳಿದಿರ ಬೇಕು.

# ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರಿಗೆ ದೊರಕುವ ಯೋಜನೆಗಳು ಹಾಗೂ ಸದರಿ ಯೋಜನೆಗಳ ಫಲಾನುಭವಿಗಳಾಗಲು ಇರುವ ಮಾನದಂಡಗಳು

**1. ಉದ್ಯೋಗಿನಿ ಯೋಜನೆ:-**

ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್ ಮೂಲಕ ಸಾಲ ಮತ್ತು ನಿಗಮದ ಮೂಲಕ ಸಹಾಯಧನವನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಕನಿಷ್ಠ ರೂ.1.00 ಲಕ್ಷದಿಂದ ಗರಿಷ್ಠ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇಕಡ 50 ರಷ್ಟು, ಗರಿಷ್ಠ ರೂ.1,50,000/-ಗಳನ್ನು ನೀಡಲಾಗುತ್ತದೆ. ಕುಟುಂಬದ ವಾರ್ಷಿಕ ಆದಾಯದ ಗರಿಷ್ಠ ಮಿತಿ ರೂ.2.00 ಲಕ್ಷಗಳಿಗೆ ಮಿತಿಗೊಳಿಸಿದೆ.

ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಮಹಿಳೆಯರಿಗೆ ಯೋಜನಾ ವೆಚ್ಚ ರೂ.1.00 ಲಕ್ಷದಿಂದ ರೂ.3.00 ಲಕ್ಷಗಳವರೆಗೆ, ಶೇ.30ರಷ್ಟು ಅಥವಾ ಗರಿಷ್ಠ ರೂ.90,000/-ಗಳ ಸಹಾಯಧನ ನೀಡಲಾಗುವುದು. ಸಾಮಾನ್ಯ ವರ್ಗದವರ ಕುಟುಂಬದ ವಾರ್ಷಿಕ ಆದಾಯವನ್ನು ಗರಿಷ್ಠ ರೂ.1.50 ಲಕ್ಷಗಳಿಗೆ ಮಿತಿಗೊಳಿಸಿದೆ. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ವರ್ಷ ಮೇಲ್ಪಟ್ಟು ಗರಿಷ್ಠ 55 ವರ್ಷದೊಳಗಿರಬೇಕು.

**ಮಾನದಂಡ:**

1. ಕುಟುಂಬದ ವಾರ್ಷಿಕ ಆದಾಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.2,00,000/-ಗಳು ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ ರೂ.1,50,000/-ಗಳಿಗೆ ಮೀರಿರಬಾರದು.
2. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು.
3. ಸಾಲ ಮಂಜೂರಾದ ನಂತರ ಉದ್ಯಮಶೀಲತ ತರಬೇತಿಗೆ ಕಡ್ಡಾಯವಾಗಿ ಹಾಜರಾಗಬೇಕು.
4. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು.
5. ಫಲಾನುಭವಿಗಳನ್ನು ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಆಯ್ಕೆ ಮಾಡಲಾಗುತ್ತದೆ.

**2. ಕಿರುಸಾಲ ಯೋಜನೆ:-**

ಈ ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ತ್ರೀಶಕ್ತಿ ಯೋಜನೆಯಡಿ ರಚನೆಗೊಂಡ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು ಆರ್ಥಿಕವಾಗಿ ಸಬಲರಾಗಲು ಪ್ರತಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘಕ್ಕೆ ನಿಗಮದ ವತಿಯಿಂದ ರೂ.1.00 ಲಕ್ಷದಿಂದ ರೂ.2.00 ಲಕ್ಷಗಳ ಬಡ್ಡಿರಹಿತ ಸಾಲ ಒದಗಿಸುವುದು. 2023-24ನೇ ಸಾಲಿಗೆ ಈ ಯೋಜನೆಗೆ ಅನುದಾನ ಒದಗಿಸಿರುವುದಿಲ್ಲ.

**ಮಾನದಂಡ:**

1. ಗುಂಪಿನ ಉಳಿತಾಯ ಕನಿಷ್ಠ ರೂ.1.00 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಇರಬೇಕು.
2. ಸ್ತ್ರೀಶಕ್ತಿ ಗುಂಪು ತಾಲ್ಲೂಕು ಒಕ್ಕೂಟದಲ್ಲಿ ನೊಂದಣಿಯಾಗಿದ್ದು, ಸದಸ್ಯತ್ವ ಹೊಂದಿರಬೇಕು.
3. ಗುಂಪಿನ ಸದಸ್ಯರೆಲ್ಲರೂ ಸೇರಿ ಒಂದೇ ಉದ್ದಿಮೆ ಕೈಗೊಳ್ಳಬೇಕು.
4. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತ ಹೊಂದಿರುವುದು.
5. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಂಘದ ಗ್ರೇಡಿಂಗ್ ಆಗಿರಬೇಕು. ಎ ಅಥವಾ ಬಿ ಗ್ರೇಡ್ ಪಡೆದಿರಬೇಕು.
6. ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

**3. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:-**

ಲಿಂಗತ್ವ ಅಲ್ಪಸಂಖ್ಯಾತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು ನೀಡಲಾಗುವುದು.

**ಮಾನದಂಡ:**

1. ವಯೋಮಿತಿ 18 ವರ್ಷ ಮೀರಿರಬೇಕು.

2. ಜಿಲ್ಲೆಯಿಂದ ಲಿಂಗತ್ವ ಅಲ್ಪಸಂಖ್ಯಾತರ ಪರ ಕಾರ್ಯನಿರ್ವಹಿಸುತ್ತಿರುವ ಹಾಗೂ ಜಿಲ್ಲಾಧಿಕಾರಿಗಳಿಂದ ಅಂಗೀಕರಿಸಲ್ಪಟ್ಟ ಸಮುದಾಯ ಆಧಾರಿತ ಸಂಸ್ಥೆಯಲ್ಲಿ ನೊಂದಾಯಿತ ಸದಸ್ಯತ್ವವನ್ನು ಅಫಿಡವಿಟ್ ಮೂಲಕ ಪ್ರಮಾಣೀಕರಿಸಿ ದಾಖಲೆಯನ್ನು ಸಲ್ಲಿಸಬೇಕು.

3.ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದಿರುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು.

4.ಯಾವುದೇ ಬ್ಯಾಂಕ್/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ.

5.ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

**4. ಚೇತನ ಯೋಜನೆ:-**

ದಮನಿತ ಮಹಿಳೆಯರು (ಮಹಿಳಾ ಲೈಂಗಿಕ ಕಾರ್ಯಕರ್ತೆಯರು) ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು ನೀಡಲಾಗುವುದು.

**ಮಾನದಂಡ:**

1. ವಯೋಮಿತಿ 18 ವರ್ಷ ಮೀರಿರಬೇಕು.

2. ಲೈಂಗಿಕ ಕಾರ್ಯಕರ್ತೆಯರ ಸಮುದಾಯ ಆಧಾರಿತ ಸಂಸ್ಥೆಯ ಗುರುತಿನ ಚೀಟಿ ಹೊಂದಿರಬೇಕು.

3.ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದಿರುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು.

4.ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ.

5.ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡಲಾಗುತ್ತದೆ.

**5. ಧನಶ್ರೀ :-**

18 ರಿಂದ 60 ವಯೋಮಾನದ ಹೆಚ್.ಐ.ವಿ ಸೋಂಕಿತ ಹಾಗೂ ಬಾಧಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು ಒದಗಿಸಲಾಗುವುದು.

**ಮಾನದಂಡ:**

1. ಅರ್ಜಿದಾರರು ಹೆಚ್.ಐ.ವಿ. ಸೋಂಕಿತರೆಂದು ಆರೋಗ್ಯ ಕೇಂದ್ರದಲ್ಲಿ/ಐ.ಸಿ.ಟಿ.ಸಿ. ಕೇಂದ್ರಗಳಲ್ಲಿ ಪಡೆದ ವೈದ್ಯಕೀಯ ವರದಿಯನ್ನು ಹೊಂದಿರುವುದು.

2.ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

3.ಅರ್ಜಿದಾರರು ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ಹೊಂದಿದ್ದು, ಚಾಲ್ತಿಯಲ್ಲಿರಬೇಕು.

4. ಅರ್ಜಿದಾರರು 18 ರಿಂದ 60 ವರ್ಷದೊಳಗಿರಬೇಕು.

5. ಅರ್ಜಿದಾರರು ಖಾತೆ ಹೊಂದಿರುವ ಆರ್ಥಿಕ ಸಂಸ್ಥೆ/ಬ್ಯಾಂಕುಗಳಲ್ಲಿ ಸಾಲಗಾರರಾಗಿರಬಾರದು.

**6. ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ:-**

ಆರ್ಥಿಕವಾಗಿ ಮಾಜಿ ದೇವದಾಸಿಯರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ 45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರಿಗೆ ನೇರವಾಗಿ ಪ್ರೋತ್ಸಾಹಧನ ಮೊತ್ತ ರೂ.30,000/-ಗಳ ಆರ್ಥಿಕ ಸೌಲಭ್ಯವನ್ನು ನೀಡಲಾಗುತ್ತಿದೆ ಹಾಗೂ ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಅರಿವು ಮೂಡಿಸುವ

ಕಾರ್ಯಕ್ರಮಗಳು, ಕಾನೂನು ಶಿಬಿರ ಹಾಗೂ ಮಾಜಿ ದೇವದಾಸಿ ಮಹಿಳೆಯರಿಗಾಗಿ ಆರೋಗ್ಯ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ.

**ಮಾನದಂಡ:**

1. 1993-94 ಹಾಗೂ 2007-08ನೇ ಸಾಲಿನಲ್ಲಿ ಮಾಡಿದ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರಬೇಕು.

2. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು.

3.ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ.

4. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

7. **ಬಡ್ಡಿ ಸಹಾಯಧನ ಯೋಜನೆ (ಕರ್ನಾಟಕ ರಾಜ್ಯ ಆರ್ಥಿಕ ಹಣಕಾಸು ನಿಗಮ ಮೂಲಕ)**

ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಕನಿಷ್ಟ ರೂ.5.00 ಲಕ್ಷದಿಂದ ರೂ.200.00 ಲಕ್ಷಗಳ ಸಾಲವನ್ನು ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇ.10ರಷ್ಟು ಬಡ್ಡಿ ಸಹಾಯಧನವನ್ನು ಸಣ್ಣ/ಮದ್ಯಮ ಕೈಗಾರಿಕೆ ಹಾಗೂ ಸೇವಾ ಘಟಕಗಳನ್ನು ಪ್ರಾರಂಭಿಸಿ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗುವ ಮಹಿಳಾ ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಸಲುವಾಗಿ ನೀಡಲಾಗುತ್ತಿದೆ.

2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಆಯವ್ಯಯ ಭಾಷಣ ಕಂಡಿಕೆ ಸಂಖ್ಯೆ 26 ರಲ್ಲಿ ಘೋಷಿಸಿರುವಂತೆ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ರೂ.2.00 ಕೋಟಿಗಳವರೆಗೆ ಶೇಕಡ 4ರ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುತ್ತದೆ.

**ಮಾನದಂಡ**:

1. ಹಾಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ/ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರಿಗೆ ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ/ಆಧುನೀಕರಣಗೊಳಿಸುವ ಸಲುವಾಗಿ. ಘಟಕ ವೆಚ್ಚ ಕನಿಷ್ಠ ರೂ.5 ಲಕ್ಷದಿಂದ ಗರಿಷ್ಟ ರೂ.2 ಕೋಟಿಗಳ ವರೆಗೆ ಆರ್ಥಿಕ ನೆರವು ಒದಗಿಸಲಾಗುವುದು.

2. * ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು.
   * ಪಾಲುದಾರಿಕೆಯ ಉದ್ಯಮ/ನಿಯಮಿತ ಕಂಪನಿಗಳಲ್ಲಿ ಹೆಚ್ಚಿನ ಷೇರು/ನಿರ್ದೇಶಕರು ಶೇ 5ರಷ್ಟು ಇರಬೇಕು.
   * ಫಲಾನುಭವಿಗಳು ಒಂದು ಸಲ ಮಾತ್ರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

8. **ಮಹಿಳೆಯರಿಗೆ ಬಡ್ಡಿ ಸಹಾಯಧನ (ಇಂದಿರಾ ಯೋಜನೆ) ಯೋಜನೆ:-**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯ ದಕ್ಷತೆಯನ್ನು ಹೆಚ್ಚಿಸಲು ಮೇಲ್ವಿಚಾರಕರಿಗೆ ದ್ವಿ-ಚಕ್ರ ವಾಹನ ಖರೀದಿಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ರೂ.50,000/-ಗಳ ಬಡ್ಡಿರಹಿತ ಸಾಲವನ್ನು ನೀಡಲಾಗುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರತಿ ಮಾಹೆ ರೂ.1000/-ಗಳನ್ನು ಇಂಧನ ವೆಚ್ಚವಾಗಿ ನೀಡಲಾಗುತ್ತಿದೆ.

**ಮಾನದಂಡ:**

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಐ.ಸಿ.ಡಿ.ಎಸ್ ಯೋಜನೆಯಲ್ಲಿ ಅಂಗನವಾಡಿ ಮೇಲ್ವಿಚಾರಕಿಯರಾಗಿರಬೇಕು.

2. ದ್ವಿ-ಚಕ್ರ ವಾಹನ ಚಾಲನೆಮಾಡಲು ಪಡೆದ ಡ್ರೈವಿಂಗ್ ಲೈಸನ್ಸ್/ಲರ್ನಿಂಗ್ ಹೊಂದಿರಬೇಕು ಲೈಸನ್ಸ್ ನ್ನು ಸಾಲ ಮರುಪಾವತಿ ಕುರಿತಂತೆ ಸ್ಕೂಟರ್ ಖರೀದಿಗೆ ತಗಲುವ ಮೊತ್ತದ ಇನ್ ವಾಯ್ಸ್ ನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಉಪ ನಿರ್ದೇಶಕರ ಮುಖಾಂತರ ಸಲ್ಲಿಸುವುದು.

9. **ವೃದ್ಧಿ ಯೋಜನೆ:-**

2022-23ನೇ ಸಾಲಿನ ಆಯವ್ಯಯ ಬಾಷಣ ಕಂಡಿಕೆ:142 ರಲ್ಲಿ ಘೋಷಿಸಿರುವಂತೆ "ವ್ಯಾಪಾರ/ಉದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿಯನ್ನು ಹೆಚ್ಚಿಸಲು KITS (ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ) ರವರು "ಎಲಿವೇಟ್" ಯೋಜನೆಯಡಿ ಗುರುತಿಸಲ್ಪಟ್ಟ ಮಹಿಳಾ ಉದ್ದಿಮೆದಾರರಿಗೆ/ಮಹಿಳಾ ನೇತೃತ್ವದ ಸ್ಟಾರ್ಟ್‌ಅಫ್ ಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ರೂ.5.00 ರಿಂದ 10.00 ಲಕ್ಷಗಳ ತನಕ ನೇರ ಸಾಲವನ್ನು ಒದಗಿಸಿ "ವೃದ್ಧಿ" ಹೆಸರಿನಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. 2023-24ನೇ ಸಾಲಿಗೆ ಈ ಯೋಜನೆಗೆ ಅನುದಾನ ಒದಗಿಸಿರುವುದಿಲ್ಲ.

**ಮಾನದಂಡ:**

1. ಕರ್ನಾಟಕದಲ್ಲಿ ನೋಂದಣಿಗೊಂಡ ಅಥವಾ ನಿಗಮಿತಗೊಂಡ ಸಂಸ್ಥೆಯಾಗಿರಬೇಕು (ಕಂಪನಿ ಕಾಯ್ದೆ 2013 ಅಥವಾ ಪಾಲುದಾರಿಕೆ 1923ರ ಕಲಂ 59 ರಂತೆ)
2. ಐಡಿಯಾ 2ಪಿಓಸಿ ಸಹಾಯಾನುದಾನ ಮೂಲಧನ ಕಾರ್ಯಕ್ರಮ 'ಎಲಿವೇಟ್' ರಡಿಯಲ್ಲಿ ವಿಜೇತರು ಅಥವಾ ರನ್ನರ್ ಅಫ್ ಆಗಿರಬೇಕು.
3. ಸಕ್ಷಮ ಪ್ರಧಿಕಾರದಿಂದ ಪ್ರಮಾಣಿತ ಫಲಿತಾಂಶಗಳು ಮತ್ತು ಮಾಹಿತಿಯೊಂದಿಗೆ ಕನಿಷ್ಠ ಕಾರ್ಯಸಾಧ್ಯತೆ ಇರುವ ಉತ್ಪನ್ನ (MVP) ಇರಬೇಕು.
4. ಕಳೆದ ಮೂರು ವರ್ಷಗಳಲ್ಲಿ ಶೇಕಡ 20ಕ್ಕಿಂತ ಹೆಚ್ಚಿನ ವಾರ್ಷಿಕ ದರದಲ್ಲಿ ಬೆಳೆದಿರಬೇಕು- ಉದ್ಯೋಗಿಗಳ ಸಂಖ್ಯೆ ಅಥವಾ ವಹಿವಾಟಿನಲ್ಲಿ
5. ಕನಿಷ್ಠ ಒಬ್ಬರು ನಿರ್ದೇಶಕರು/ಪಾಲುದಾರರು ಕಛೇರಿಯಲ್ಲಿ ಗಣನೀಯ ಪ್ರಮಾಣದ ಷೇರುಗಳನ್ನು ಹೊಂದಿರುವ ಮಹಿಳಾ ಉದ್ಯಮಶೀಲರಾಗಿರಬೇಕು.

## ಅನುಬಂಧ-02

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

| ಪ್ರಸ್ತುತ ರಾಜ್ಯದಲ್ಲಿ ಯುವತಿ/ಮಹಿಳೆಯರ ಫಲಾನುಭವಿಗಳ ಸಂಖ್ಯೆ (ಜಿಲ್ಲಾವಾರು ವಿವರ) | | | | | | |
|---|---|---|---|---|---|---|
| ಕ್ರ.ಸಂ. | ಜಿಲ್ಲೆಗಳು | ಸಾಂತ್ವನ | ಸ್ವಾಧಾರ ಗೃಹ | ಡಿ.ವಿ. ಕಾಯ್ದೆ ಪ್ರಕರಣಗಳ ಸಂಖ್ಯೆ | ಒನ್ ಸ್ಟಾಪ್ ಸೆಂಟರ್ | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ |
| 1 | ಬಾಗಲಕೋಟೆ | 924 | 79 | 132 | 259 | 0 |
| 2 | ಬೆಂಗಳೂರು (ನಗರ) | 5047 | 309 | 1412 | 756 | 72 |
| 3 | ಬೆಂಗಳೂರು (ಗ್ರಾಮಾಂತರ) | 1294 | 71 | 60 | 285 | 0 |
| 4 | ರಾಮನಗರ | 1230 | 40 | 152 | 163 | 0 |
| 5 | ಬೆಳಗಾವಿ | 1817 | 112 | 148 | 222 | 0 |
| 6 | ಬಳ್ಳಾರಿ | 422 | 0 | 46 | 101 | 0 |
| 7 | ಬೀದರ್ | 524 | 118 | 141 | 75 | 0 |
| 8 | ವಿಜಯಪುರ | 4300 | 40 | 192 | 156 | 0 |
| 9 | ಚಾಮರಾಜನಗರ | 1442 | 70 | 107 | 171 | 0 |
| 10 | ಚಿಕ್ಕಮಗಳೂರು | 3129 | 23 | 126 | 187 | 0 |
| 11 | ಚಿತ್ರದುರ್ಗ | 972 | 20 | 67 | 123 | 0 |
| 12 | ದಕ್ಷಿಣ ಕನ್ನಡ | 544 | 27 | 280 | 422 | 24 |
| 13 | ದಾವಣಗೆರೆ | 529 | 70 | 147 | 213 | 0 |
| 14 | ಧಾರವಾಡ | 689 | 107 | 258 | 155 | 32 |
| 15 | ಗದಗ | 620 | 25 | 145 | 198 | 0 |
| 16 | ಕಲಬುರ್ಗಿ | 1605 | 73 | 21 | 782 | 15 |
| 17 | ಹಾಸನ | 1125 | 34 | 60 | 268 | 0 |
| 18 | ಹಾವೇರಿ | 1564 | 33 | 93 | 198 | 0 |
| 19 | ಕೊಡಗು | 534 | 50 | 161 | 237 | 0 |
| 20 | ಕೋಲಾರ | 962 | 0 | 180 | 275 | 0 |
| 21 | ಚಿಕ್ಕಬಳ್ಳಾಪುರ | 1790 | 40 | 63 | 178 | 0 |
| 22 | ಕೊಪ್ಪಳ | 927 | 30 | 262 | 245 | 0 |
| 23 | ಮಂಡ್ಯ | 777 | 0 | 138 | 193 | 0 |
| 24 | ಮೈಸೂರು | 1392 | 146 | 454 | 380 | 15 |
| 25 | ರಾಯಚೂರು | 1098 | 0 | 48 | 223 | 0 |
| 26 | ಶಿವಮೊಗ್ಗ | 705 | 40 | 301 | 339 | 0 |
| 27 | ತುಮಕೂರು | 1809 | 80 | 244 | 269 | 0 |
| 28 | ಉಡುಪಿ | 217 | 28 | 60 | 292 | 0 |
| 29 | ಉತ್ತರ ಕನ್ನಡ | 816 | 0 | 274 | 168 | 0 |
| 30 | ಯಾದಗಿರಿ | 927 | 21 | 23 | 129 | 0 |
| 31 | ವಿಜಯನಗರ | 0 | 0 | 927 | 0 | 0 |
| | ಒಟ್ಟು | **39731** | **1686** | **6722** | **7662** | **158** |

| ಕ್ರ ಸಂ. | ಜಿಲ್ಲೆಯ ಹೆಸರು | ಸ್ವೀಕಾರ ಕೇಂದ್ರ ಮತ್ತು ರಾಜ್ಯ ಮಹಿಳಾ ನಿಲಯಗಳು | ಬಾಲಕಿಯರ ವಸತಿ ನಿಲಯ | ಉಜ್ವಲ ಯೋಜನೆ | ಶಿಶು ಪಾಲನಾ ಕೇಂದ್ರಗಳು |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಂಗಳೂರು ನಗರ | 46 | 0 | 48 | 92 |
| 2 | ಬೆಂಗಳೂರು(ಗ್ರಾ) | 0 | 0 | 28 | 79 |
| 3 | ಬಾಗಲಕೋಟೆ | 0 | 100 | 0 | 99 |
| 4 | ಬೆಳಗಾವಿ | 0 | 68 | 20 | 116 |
| 5 | ಬಳ್ಳಾರಿ | 70 | 50 | 0 | 96 |
| 6 | ಬೀದರ್ | 0 | 200 | 0 | 87 |
| 7 | ವಿಜಯಪುರ | 0 | 250 | 0 | 125 |
| 8 | ಚಾಮರಾಜನಗರ | 0 | 100 | 0 | 87 |
| 9 | ಚಿಕ್ಕಬಳ್ಳಾಪುರ | 0 | 200 | 0 | 58 |
| 10 | ಚಿಕ್ಕಮಗಳೂರು | 0 | 48 | 0 | 87 |
| 11 | ಚಿತ್ರದುರ್ಗ | 0 | 0 | 10 | 108 |
| 12 | ದಕ್ಷಿಣ ಕನ್ನಡ | 0 | 0 | 0 | 94 |
| 13 | ದಾವಣಗೆರೆ | 62 | 0 | 0 | 97 |
| 14 | ಧಾರವಾಡ | 87 | 0 | 18 | 73 |
| 15 | ಗದಗ | 4 | 50 | 64 | 123 |
| 16 | ಹಾಸನ | 0 | 171 | 8 | 79 |
| 17 | ಹಾವೇರಿ | 0 | 50 | 2 | 109 |
| 18 | ಕೊಡಗು | 0 | 0 | 0 | 65 |
| 19 | ಕೋಲಾರ | 0 | 50 | 0 | 97 |
| 20 | ಕಲಬುರಗಿ | 98 | 125 | 0 | 103 |
| 21 | ಕೊಪ್ಪಳ | 0 | 100 | 0 | 128 |
| 22 | ಮಂಡ್ಯ | 0 | 0 | 17 | 105 |
| 23 | ಮೈಸೂರು | 68 | 50 | 0 | 93 |
| 24 | ರಾಯಚೂರು | 0 | 200 | 0 | 69 |
| 25 | ರಾಮನಗರ | 0 | 0 | 0 | 73 |
| 26 | ಶಿವಮೊಗ್ಗ | 100 | 0 | 35 | 83 |
| 27 | ತುಮಕೂರು | 3 | 0 | 0 | 94 |
| 28 | ಉತ್ತರಕನ್ನಡ | 6 | 0 | 0 | 97 |
| 29 | ಉಡುಪಿ | 76 | 0 | 0 | 53 |
| 30 | ವಿಜಯನಗರ | 0 | 100 | 0 | 71 |
| 31 | ಯಾದಗಿರಿ | 0 | 150 | 0 | 99 |
| ಒಟ್ಟು | | 620 | 2062 | 250 | 2839 |

| ಸ್ತ್ರೀಶಕ್ತಿ ಗುಂಪುಗಳ ಮಹಿಳಾ ಸದಸ್ಯರ ಮಾಹಿತಿ | | | |
|---|---|---|---|
| ಕ್ರ.ಸಂ. | ಜಿಲ್ಲೆಯ ಹೆಸರು | ರಚನೆಯಾದ ಸ್ತ್ರೀಶಕ್ತಿ ಗುಂಪುಗಳು | ಒಟ್ಟು ಮಹಿಳಾ ಸದಸ್ಯರು |
| 1 | ಬೆಳಗಾವಿ | 16021 | 255687 |
| 2 | ಬಾಗಲಕೋಟೆ | 4879 | 67652 |
| 3 | ವಿಜಯಪುರ | 4693 | 59760 |
| 4 | ಕಲ್ಬುರ್ಗಿ | 7847 | 116079 |
| 5 | ಬೀದರ್ | 4051 | 48083 |
| 6 | ರಾಯಚೂರು | 6210 | 102932 |
| 7 | ಕೊಪ್ಪಳ | 3606 | 49410 |
| 8 | ಗದಗ | 3971 | 61192 |
| 9 | ಧಾರವಾಡ | 3595 | 59305 |
| 10 | ಉತ್ತರ ಕನ್ನಡ | 2688 | 37566 |
| 11 | ಹಾವೇರಿ | 5301 | 83262 |
| 12 | ಬಳ್ಳಾರಿ | 6856 | 99879 |
| 13 | ಚಿತ್ರದುರ್ಗ | 6148 | 89190 |
| 14 | ದಾವಣಗೆರೆ | 5822 | 77837 |
| 15 | ಶಿವಮೊಗ್ಗ | 5000 | 76793 |
| 16 | ಉಡುಪಿ | 3087 | 44212 |
| 17 | ಚಿಕ್ಕಮಗಳೂರು | 3806 | 59842 |
| 18 | ತುಮಕೂರು | 11335 | 177077 |
| 19 | ಕೋಲಾರ | 5009 | 75720 |
| 20 | ಬೆಂಗಳೂರು ನಗರ | 5584 | 85743 |
| 21 | ಬೆಂಗಳೂರು(ಗ್ರಾ) | 3872 | 60910 |
| 22 | ಮಂಡ್ಯ | 7262 | 122423 |
| 23 | ಹಾಸನ | 7237 | 100188 |
| 24 | ದಕ್ಷಿಣ ಕನ್ನಡ | 4158 | 60576 |
| 25 | ಕೊಡಗು | 1328 | 19061 |
| 26 | ಮೈಸೂರು | 7853 | 124242 |
| 27 | ಚಾಮರಾಜನಗರ | 4480 | 67505 |
| 28 | ಚಿಕ್ಕಬಳ್ಳಾಪುರ | 5736 | 89031 |
| 29 | ರಾಮನಗರ | 5086 | 87084 |
| 30 | ಯಾದಗಿರಿ | 3439 | 73394 |
| | **ಒಟ್ಟು** | **165960** | **2531635** |

| ಅ) ಮಾತೃಪೂರ್ಣ ಯೋಜನೆಯಡಿ ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆ | | | |
|---|---|---|---|
| **ಕ್ರ.ಸಂ** | **ಜಿಲ್ಲೆಯ ಹೆಸರು** | **ಗರ್ಭಿಣಿ ಯರು** | **ಬಾಣಂತಿ ಯರು** |
| 1 | ಬಾಗಲಕೋಟೆ | 18252 | 17157 |
| 2 | ಬೆಂಗಳೂರು (ಗ್ರಾ) | 3235 | 3001 |
| 3 | ರಾಮನಗರ | 2099 | 4862 |
| 4 | ಬೆಂಗಳೂರು (ನ) | 6072 | 9022 |
| 5 | ಬೆಳಗಾವಿ | 39425 | 42303 |
| 6 | ಬಳ್ಳಾರಿ | 14129 | 12290 |
| 7 | ಬೀದರ್ | 17409 | 17901 |
| 8 | ವಿಜಯಪುರ | 25635 | 24694 |
| 9 | ಚಾಮರಾಜನಗರ | 3394 | 4714 |
| 10 | ಚಿಕ್ಕಮಗಳೂರು | 5710 | 6029 |
| 11 | ಚಿತ್ರದುರ್ಗ | 11239 | 11508 |
| 12 | ಮಂಗಳೂರು | 12542 | 13790 |
| 13 | ದಾವಣಗೆರೆ | 10008 | 9856 |
| 14 | ಧಾರವಾಡ | 11947 | 11177 |
| 15 | ಗದಗ | 9082 | 8511 |
| 16 | ಕಲಬುರಗಿ | 27251 | 29624 |
| 17 | ಯಾದಗಿರಿ | 11411 | 13152 |
| 18 | ಹಾಸನ | 8740 | 9928 |
| 19 | ಹಾವೇರಿ | 12825 | 12296 |
| 20 | ಕೋಲಾರ | 6492 | 8933 |
| 21 | ಚಿಕ್ಕಬಳ್ಳಾಪುರ | 7166 | 8407 |
| 22 | ಕೊಡಗು | 3210 | 3655 |
| 23 | ಕೊಪ್ಪಳ | 13116 | 12953 |
| 24 | ಮಂಡ್ಯ | 5615 | 8089 |
| 25 | ಮೈಸೂರು | 6992 | 12586 |
| 26 | ರಾಯಚೂರು | 22280 | 21820 |
| 27 | ಶಿವಮೊಗ್ಗ | 10129 | 10422 |
| 28 | ತುಮಕೂರು | 12147 | 13209 |
| 29 | ಉಡುಪಿ | 5353 | 6119 |
| 30 | ಉತ್ತರ ಕನ್ನಡ | 7948 | 9263 |
| 31 | ವಿಜಯನಗರ | 12656 | 12487 |
| **ಒಟ್ಟು** | | **363509** | **389758** |

| ಆ) ಪ್ರಾಯಪೂರ್ವ ಯೋಜನೆಯಡಿ ಫಲಾನುಭವಿಗಳ ಸಂಖ್ಯೆ | | |
|---|---|---|
| **ಕ್ರ.ಸಂ** | **ಜಿಲ್ಲೆಯ ಹೆಸರು** | **ಫಲಾನುಭವಿಗಳು** |
| 1 | ರಾಯಚೂರು | 117 |
| 2 | ಯಾದಗಿರಿ | 1964 |
| **ಒಟ್ಟು** | | **2081** |

# ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ನಿಗದಿಪಡಿಸಲಾದ ಫಲಾನುಭವಿಗಳ ಯೋಜನಾವಾರು ವಿವರ

| ಕ್ರ.ಸಂ | ಜಿಲ್ಲೆ | ಯೋಜನೆಗಳು | | | | | | |
|---|---|---|---|---|---|---|---|---|
| | | ಉದ್ಯೋಗಿನಿ | ಚೇತನ | ಲಿಂಗತ್ವ ಅಲ್ಪಸಂಖ್ಯಾತರ ಪುರ್ನವಸತಿ | ಧನಶ್ರೀ | ಮಾಜಿ ದೇವದಾಸಿ ಮಹಿಳೆಯರಿಗೆ ಆದಾಯೋತ್ಪನ್ನಕರ ಚಟುವಟಿಕೆ | ಬಡ್ಡಿ ಸಹಾಯಧನ (KSFC) | ಇಂದಿರಾ |
| 1 | ಬೆಂಗಳೂರು ನಗರ | 125 | 132 | 120 | 50 | 0 | 101 | 2 |
| 2 | ಬೆಂಗಳೂರು ಗ್ರಾಮಾಂತರ | 23 | 4 | 38 | 2 | 0 | 38 | 0 |
| 3 | ಬೆಳಗಾವಿ | 91 | 75 | 46 | 88 | 10 | 35 | 0 |
| 4 | ವಿಜಯಪುರ | 43 | 25 | 41 | 35 | 22 | 18 | 0 |
| 5 | ಬಾಗಲಕೋಟೆ | 39 | 37 | 36 | 69 | 54 | 21 | 0 |
| 6 | ಬಳ್ಳಾರಿ | 31 | 28 | 31 | 31 | 18 | 13 | 0 |
| 7 | ವಿಜಯನಗರ | 29 | 45 | 20 | 14 | 100 | 0 | 0 |
| 8 | ಬೀದರ್ | 41 | 15 | 21 | 11 | 0 | 19 | 0 |
| 9 | ಚಾಮರಾಜನಗರ | 23 | 8 | 16 | 9 | 0 | 11 | 0 |
| 10 | ಚಿತ್ರದುರ್ಗ | 36 | 21 | 10 | 13 | 16 | 28 | 0 |
| 11 | ಚಿಕ್ಕಮಗಳೂರು | 24 | 11 | 21 | 8 | 0 | 15 | 0 |
| 12 | ಚಿಕ್ಕಬಳ್ಳಾಪುರ | 28 | 13 | 26 | 9 | 0 | 16 | 0 |
| 13 | ದಾವಣಗೆರೆ | 43 | 21 | 31 | 21 | 11 | 24 | 0 |
| 14 | ದಕ್ಷಿಣ ಕನ್ನಡ | 50 | 9 | 38 | 13 | 0 | 30 | 0 |
| 15 | ಧಾರವಾಡ | 42 | 16 | 40 | 24 | 13 | 38 | 0 |
| 16 | ಗದಗ | 24 | 17 | 20 | 15 | 24 | 13 | 0 |
| 17 | ಕಲಬುರಗಿ | 52 | 24 | 30 | 23 | 10 | 22 | 0 |
| 18 | ಹಾಸನ | 32 | 15 | 39 | 16 | 0 | 27 | 0 |
| 19 | ಹಾವೇರಿ | 35 | 14 | 21 | 15 | 15 | 10 | 0 |
| 20 | ಕೋಲಾರ | 35 | 18 | 30 | 13 | 0 | 18 | 0 |
| 21 | ಕೊಪ್ಪಳ | 30 | 12 | 30 | 23 | 20 | 17 | 0 |
| 22 | ಕೊಡಗು | 20 | 5 | 15 | 4 | 0 | 20 | 0 |
| 23 | ಮಂಡ್ಯ | 35 | 9 | 30 | 14 | 0 | 20 | 0 |
| 24 | ಮೈಸೂರು | 63 | 17 | 40 | 32 | 0 | 40 | 0 |
| 25 | ರಾಯಚೂರು | 45 | 16 | 35 | 25 | 17 | 19 | 0 |
| 26 | ರಾಮನಗರ | 24 | 3 | 30 | 6 | 0 | 6 | 0 |
| 27 | ಶಿವಮೊಗ್ಗ | 35 | 10 | 45 | 11 | 0 | 20 | 0 |
| 28 | ತುಮಕೂರು | 53 | 15 | 49 | 15 | 0 | 40 | 2 |
| 29 | ಉತ್ತರಕನ್ನಡ | 31 | 19 | 20 | 7 | 0 | 16 | 0 |
| 30 | ಉಡುಪಿ | 27 | 4 | 15 | 14 | 0 | 17 | 0 |
| 31 | ಯಾದಗಿರಿ | 27 | 9 | 16 | 11 | 14 | 3 | 0 |
| ಒಟ್ಟು | | 1236 | 667 | 1000 | 641 | 344 | 715 | 4 |

# ಅನುಬಂಧ-03

## ವಾರ್ಷಿಕ ಅಂದಾಜು ವೆಚ್ಚದ ವಿವರ

### ಮಹಿಳಾ ಮತ್ತು ಮಕ್ಕಳ ಅಭಿ ವೃದ್ಧಿ ಇಲಾಖೆ

| ಕ್ರ. ಸಂ. | ಯೋಜನೆಗಳು | ವಾರ್ಷಿಕ ಅಂದಾಜು (ರೂ.ಲಕ್ಷಗಳಲ್ಲಿ) |
|---|---|---|
| 1 | ಸಾಂತ್ವನ | 1050.00 |
| 2 | ಶಕ್ತಿ ಸದನ (ಉಜ್ವಲ & ಸ್ವಾಧಾರ ಗೃಹ) | 1200.00 |
| 3 | ಡಿ.ವಿ. ಕಾಯ್ದೆ | 1283.49 |
| 4 | ಒನ್ ಸ್ಟಾಪ್ ಸೆಂಟರ್ | 2317.90 |
| 5 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | 1000.00 |
| 6 | ಸ್ವೀಕಾರ ಕೇಂದ್ರ ಮತ್ತು ರಾಜ್ಯ ಮಹಿಳಾ ನಿಲಯ | 753.79 |
| 7 | ಬಾಲಕಿಯರ ವಸತಿ ನಿಲಯ | 450.00 |
| 8 | ಶಿಶು ಪಾಲನಾ ಕೇಂದ್ರಗಳು | 1500.00 |
| 9 | ಸ್ತ್ರೀಶಕ್ತಿ | 323.00 |
| 10 | ಮಾತೃಪೂರ್ಣ | 61427.00 |
| 11 | ಪ್ರಾಯಪೂರ್ವ ಬಾಲಕಿಯರ ಯೋಜನೆ | 59.00 |
| | **ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ** | |
| 12 | ಉದ್ಯೋಗಿನಿ | 1500.00 |
| 13 | ಚೇತನ | 200.00 |
| 14 | ಲಿಂಗತ್ವ ಅಲ್ಪಸಂಖ್ಯಾತರ ಪುರ್ನವಸತಿ | 300.00 |
| 15 | ಧನಶ್ರೀ | 700.00 |
| 16 | ಮಾಜಿ ದೇವದಾಸಿ ಮಹಿಳೆಯರಿಗೆ ಆದಾಯೋತ್ಪನ್ನಕರ ಚಟುವಟಿಕೆ | 337.20 |
| 17 | ಬಡ್ಡಿ ಸಹಾಯಧನ (KSFC) | 5200.00 |
| 18 | ಇಂದಿರಾ | 2.00 |
| 19 | ಮಹಿಳಾ ತರಬೇತಿ | 200.00 |